ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಮತ್ತು ಮಾನ್ಯ ಯಡಿಯೂರಪ್ಪನವರು ಹೇಳಿರತಕ್ಕಂಥ ಸಲಹೆ ಚೆನ್ನಾಗಿದೆ. ಹಳ್ಳಿಗಳಲ್ಲಿ ಬಹಳ ತೊಂದರೆಯಾಗುತ್ತಿದೆ, ಎಲ್ಲಾ ಬಹಳ ದುಬಾರಿಯಾಗುತ್ತಿದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಅದರ ಬಗ್ಗೆ ಸಂಬಂಧಪಟ್ಟಂತಹ ಮಂತ್ರಿಗಳ ಜೊತೆಗೆ ನಾನು ಮಾತನಾಡುತ್ತೇನೆ. KPTCLನವರು ಯಾವ ಹಿನ್ನೆಲೆಯಲ್ಲಿ ಇದನ್ನೆಲ್ಲಾ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನೋಡಿ, ಅವರ ಜೊತೆ ಚರ್ಚೆ ಮಾಡುತ್ತೇನೆ. ಇದಕ್ಕಾಗಿ ನಾನು ಬಜೆಟ್‌ನಲ್ಲಿ ಮಾತೊಂದನ್ನು ಹೇಳಿದ್ದೇನೆ. ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕೊಟ್ಟಿರತಕ್ಕಂಥ ಭಾಗದಲ್ಲೆಲ್ಲಾ ಲೈಟ್‌ಗಳಿಲ್ಲ. ಅದಕ್ಕಾಗಿ ಅಲ್ಲಿ ವಸೂಲಾದಂತಹ ಹಣವನ್ನು ನಿಮಗೇ ಕೊಡುತ್ತೇನೆ, ವಿದ್ಯುಚ್ಛಕ್ತಿಗೆ ಖರ್ಚಾಗತಕ್ಕಂಥದ್ದನ್ನೆಲ್ಲಾ ನೀವೇ ಮಾಡಿಕೊಳ್ಳಿ ಎಂದು ಬಜೆಟ್‌ನಲ್ಲಿ ಈ ಸಾರಿ ನಾನು ಹೇಳಿದ್ದೇನೆ. ನಾವು ಆಶ್ರಯ ಮನೆಗಳನ್ನು ಕಟ್ಟಿ ಕೊಟ್ಟಿದ್ದೇವೆ. ಅಲ್ಲಿ ರಸ್ತೆ ಮಾಡಿ ಕೊಟ್ಟಿಲ್ಲ, ವಿದ್ಯುತ್ ಕೊಟ್ಟಿಲ್ಲ, ಚರಂಡಿ ಮಾಡಿಕೊಟ್ಟಿಲ್ಲ, ಈ ತರಹದ್ದು ಎಲ್ಲಾ ಇವೆ. ಅದಕ್ಕೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ, ಆಶ್ರಯ ಮನೆಯಿದ್ದರಲ್ಲಿ ಅವರದು ಸಾಲದ ರೂಪದಲ್ಲಿ ಇರುತ್ತದಲ್ಲಾ, ಆ ರೀತಿ ಸರ್ಕಾರಕ್ಕೆ ಕಟ್ಟಿರತಕ್ಕಂಥ ದುಡ್ಡಿನಲ್ಲಿ, ಸ್ವಲ್ಪ ಭಾಗವನ್ನು ನಾವು ಇವತ್ತು ಅವರಿಗೇ ಕೊಡುತ್ತೇವೆ. ಆ ರೀತಿ ಮಾಡಬೇಕೆಂದು ಈ ಬಾರಿಯ ಬಜೆಟ್‌ನಲ್ಲೂ ಸಹಿತ ನಾನು ಹೇಳಿದ್ದೇನೆ. ಇದರ ಬಗ್ಗೆ ನಾವು ಚರ್ಚೆ ಮಾಡಿ, ಒಂದು ಯೋಗ್ಯವಾದಂತಹ ತೀರ್ಮಾನಕ್ಕೆ ಬರುತ್ತೇವೆ.

ವಿಷಯ : ಶಿವಮೊಗ್ಗದ ವೀರಭದ್ರೇಶ್ವರ ಚಿತ್ರಮಂದಿರದ ಮಾಲೀಕರನ್ನು ವಿನಾಕಾರಣ ಬಂಧಿಸಿ ಕಿರುಕುಳ ನೀಡಿರುವ ಬಗ್ಗೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಮೊನ್ನೆ ಶುಕ್ರವಾರ ಶಿವಮೊಗ್ಗದಲ್ಲಿ ಒಬ್ಬ ಸಿನಿಮಾ ಥಿಯೇಟರ್‌ನ ಮಾಲೀಕರಾದ ಗೌರವಸ್ಥ ನಾಗರಿಕರನ್ನು ಪೊಲೀಸರು ಬಂಧಿಸಿದ್ದಾರೆ. ಅವರನ್ನು ಏತಕ್ಕಾಗಿ ಬಂಧನ ಮಾಡಿದ್ದಾರೆ ಎಂದು ಕೇಳಿದರೆ, ಒಂದು ಪೋಸ್ಟರ್ ಅನ್ನು ಹಚ್ಚಿದ್ದಾರೆ, ಅದು ಅಶ್ಲೀಲವಾಗಿದೆ ಎಂಬ ಕಾರಣದಿಂದ ಅವರನ್ನು ಬಂಧಿಸಲಾಗಿದೆ. ಆ ಪೋಸ್ಟರ್‌ಗಳನ್ನು ಹಚ್ಚಲು ಸೂಕ್ತವಾದುದು

ಎಂದು ಸಂಬಂಧಪಟ್ಟವರು ಸರ್ಟಿಫಿಕೇಟ್ ಅನ್ನು ಕೊಟ್ಟಿದ್ದಾರೆ. ಅದನ್ನು ಹಚ್ಚಲು ಲೈಸೆನ್ಸ್ ಅನ್ನೂ ಸಹ ತೆಗೆದುಕೊಳ್ಳಲಾಗಿದೆ. ಲೈಸೆನ್ಸ್ ತೆಗೆದುಕೊಂಡಿದ್ದರೂ ಸಹ ಈ ರೀತಿಯಾಗಿ ಅವರನ್ನು ಅರೆಸ್ಟ್ ಮಾಡಿದ್ದಾರೆ. ಇತ್ತೀಚೆಗೆ ಬಿಡುಗಡೆಯಾಗಿರುವ ಹೊಸ ಕನ್ನಡ ಚಲನಚಿತ್ರ ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಇದರ ಪೋಸ್ಟರ್ ಅನ್ನು ಶಿವಮೊಗ್ಗದಲ್ಲಿ ಅಂಟಿಸಿದಾಗ, ಪೋಲಿಸರು ಅಲ್ಲಿಯ ಶ್ರೀ ವೀರಭದ್ರೇಶ್ವರ ಚಿತ್ರಮಂದಿರದ ಮಾಲೀಕರನ್ನು ಪೊಲೀಸ್ ಸ್ಟೇಷನ್‌ಗೆ ಕರೆದರು. ನೀವು ಅಶ್ಲೀಲವಾದ ಪೋಸ್ಟರ್ ಅನ್ನು ಹಚ್ಚಿದ್ದೀರಿ ಎಂದು ಅವರು ಹೇಳಿದರು. ಆಗ ಅವನು ಸರ್ಟಿಫಿಕೇಟ್ ಅನ್ನು ತೆಗೆದುಕೊಂಡು ಹೋಗಿ ತೋರಿಸಿದ. ಪೊಲೀಸರು, ನಮಗೆ ಅದೆಲ್ಲಾ ಗೊತ್ತಿಲ್ಲ, ನೀನು ಇಲ್ಲೇ ಕುಳಿತುಕೋ ಎಂದರು. ಅವರನ್ನು ಶುಕ್ರವಾರ ಸಾಯಂಕಾಲಹತನಕ ಕೂರಿಸಿಕೊಂಡು, ಶನಿವಾರ ಮತ್ತು ಭಾನುವಾರ ಅವರನ್ನು ಜೈಲಿಗೆ ಕಳುಹಿಸಿದ್ದಾರೆ. ಒಬ್ಬ ಗೌರವಾನ್ವಿತ ನಾಗರಿಕರಾದ ಚಿತ್ರಮಂದಿರದ ಮಾಲೀಕರು ಸೆನ್ಸಾರ್ ಬೋರ್ಡ್‌ನಿಂದ ಸರ್ಟಿಫಿಕೇಟ್ ಪಡೆದಂತಹ ಪೋಸ್ಟರ್ ಅಂಟಿಸಿದ್ದರೆ, ಅದರ ಬಗ್ಗೆ ಪೊಲೀಸರು ಚಿತ್ರಮಂದಿರದ ಮಾಲೀಕರಾದ ವೀರಣ್ಣ ಮತ್ತು ಅದರ ಮ್ಯಾನೇಜರ್ ಸಿದ್ದಪ್ಪನವರು, ಇವರಿಬ್ಬರನ್ನೂ ಕೂಡ ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿದ್ದಾರಲ್ಲಾ, ಇದಕ್ಕೆ ಯಾರು ಜವಾಬ್ದಾರರು ? ಗೌವವಾನ್ವಿತ ನಾಗರಿಕರು ಈ ಸರ್ಕಾರದಲ್ಲಿ ಗೌರವದಿಂದ ಬದುಕಬೇಕೋ ಬೇಡವೋ ಎಂಬುದನ್ನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ ತಿಳಿಸಬೇಕು. ಅವರ ಇಡೀ ಕುಟುಂಬದ ಎಲ್ಲರೂ ವ್ಯಾಪಾರಸ್ಥರು. ಜಿಲ್ಲಾ ರಕ್ಷಣಾಧಿಕಾರಿಗಳ ಹತ್ತಿರ ಹೋಗಿ, ಈ ರೀತಿ ನಿಮ್ಮ ಪೊಲೀಸ್ ಇಲಾಖೆಯವರು ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿದ್ದಾರೆ, ಇದು ಅನ್ಯಾಯವಲ್ಲವೇ ? ಎಂದು ಕೇಳಿದರೆ, ಈ ವಿಚಾರ ನನಗೆ ಗೊತ್ತೇ ಇಲ್ಲ ಎಂದು ಜಿಲ್ಲಾ ರಕ್ಷಣಾಧಿಕಾರಿಗಳು ಹೇಳುತ್ತಾರಂತೆ, ಈ ತರಹದ್ದು ಆಗುತ್ತಿರುತ್ತದೆ, ಸ್ವಲ್ಪ ಸುಧಾರಿಸಿಕೊಳ್ಳಬೇಕ್ರಿ ಎಂದು ಹೇಳುತ್ತಾರಂತೆ, ಇತ್ತೀಚೆಗೆ ಅವರ ಮನೆಯಲ್ಲಿ ಮದುವೆಯಾಗಿದೆ. ಮನೆಗೆ ಅಳಿಯ ಬಂದಿದ್ದಾರೆ. ಚಿತ್ರಮಂದಿರದ ಮಾಲೀಕರು ಜೈಲಿನಲ್ಲಿ ಇದ್ದಾರೆ ಎಂದರೆ, ಅವರು ಆತ್ಮಹತ್ಯೆ ಮಾಡಿಕೊಂಡರೆ, ಅದಕ್ಕೆ ಯಾರು ಸ್ವಾಮಿ ಹೊಣೆಗಾರರು ? ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಗಂಗರಾಜ್‌ರವರು ಶಿವಮೊಗ್ಗಕ್ಕೆ ಬಂದು, ಅಲ್ಲೊಂದು ಪತ್ರಿಕಾ ಗೋಷ್ಠಿ ನಡೆಸಿ, ಇದು ಬಹಳ ಅನ್ಯಾಯವಾಗಿದೆ, ಇದರ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕು, ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮವನ್ನೂ ಸಹಿತ ತೆಗೆದುಕೊಳ್ಳಬೇಕು ಎನ್ನುವಂತಹ ಮಾತನ್ನು ಅಲ್ಲಿ ಹೇಳಿ ಬಂದಿದ್ದಾರೆ. ಪೊಲೀಸ್ ಇಲಾಖೆ ಈ ರೀತಿ ರಾಜ್ಯದಲ್ಲಿ

ಆಡಳಿತ ನಡೆಸುತ್ತಿದೆ. ಗೌರವಾನ್ವಿತ ನಾಗರಿಕರು ಇಲ್ಲಿ ಜೀವನ ಮಾಡಬೇಕೋ ಬೇಡವೋ ? Chamber of Commerce ನವರೂ ಸಹ delegation ನಲ್ಲಿ ಹೋಗಿ ಜಿಲ್ಲಾ ರಕ್ಷಣಾಧಿಕಾರಿಗಳನ್ನು ಈ ಬಗ್ಗೆ ಭೇಟಿ ಮಾಡಿದರೆ, ನಾನಿದ್ದೇನೆ, ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಸೌಜನ್ಯದ ಮಾತುಗಳನ್ನಾದರೂ ಹೇಳಿದ್ದಲ್ಲಿ, ಅದನ್ನು ನಾನು ನಿಜಕ್ಕೂ ಮೆಚ್ಚುತ್ತಿದ್ದೆ. Film chamber ನವರೂ ಸಹ ಅವರ ಜೊತೆಗೆ ಹೋಗಿದ್ದಾರೆ. ಇಡೀ ಶಿವಮೊಗ್ಗ ನಗರದಲ್ಲಿ ಒಂದು ಭಯದ ವಾತಾವರಣ ನಿರ್ಮಾಣವಾಗಿದೆ. ಯಾರು ಯಾರನ್ನು ಬೇಕಾದರೂ, ಯಾವ ಸಂದರ್ಭದಲ್ಲಾದರೂ ಅರೆಸ್ಟ್ ಮಾಡಬಹುದು, ಜೈಲಿಗೆ ಕಳುಹಿಸಬಹುದು, ಹೇಳುವವರು ಕೇಳುವವರು ಯಾರು ಇಲ್ಲ ಎನ್ನುವಂತಹ ಸ್ಥಿತಿ ಇವತ್ತು ರಾಜ್ಯದಲ್ಲಿ ನಿರ್ಮಾಣ ಆಗಿದೆ. ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುವುದು ಇಷ್ಟೇ. ಯಾವ ವ್ಯಕ್ತಿ ಅಥವಾ ಯಾವ ಅಧಿಕಾರಿ ಈ ರೀತಿ ಮಾಡಿದ್ದಾನೋ, ಅವನನ್ನು ತಾವು ತಕ್ಷಣ suspensionನಲ್ಲಿ ಇಟ್ಟು, ಅವರ ಮೇಲೆ action ತೆಗೆದುಕೊಂಡು, ನಿರ್ಭೀತಿಯಿಂದ ತಾವು ವ್ಯಾಪಾರಗಳನ್ನು ಮಾಡಿ ಎಂದು ಇಡೀ ರಾಜ್ಯದ ಜನತೆಗೆ ತಾವು ಆಶ್ವಾಸನೆ ಕೊಡಬೇಕು, ನೆಮ್ಮದಿ ಬರುವ ರೀತಿಯಲ್ಲಿ ಅವರ ಬಗ್ಗೆ ನಡೆದುಕೊಳ್ಳಬೇಕು ಎನ್ನುವಂತಹ ಮಾತನ್ನು ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಕೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಈ ಬಗ್ಗೆ ಮಾನ್ಯ ಪ್ರಕಾಶ್‌ರವರಲ್ಲಿ ರಿಪೋರ್ಟ್ ಇದೆ. ಇದರ ಬಗ್ಗೆ ಅವರೇ ಉತ್ತರ ಕೊಡುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಆ ದಿವಸ ಬೆಳಿಗ್ಗೆ ಸನ್ಮಾನ್ಯ ಈಶ್ವರಪ್ಪನವರು, ವೀರಭದ್ರೇಶ್ವರ ಚಿತ್ರಮಂದಿರದ ಮಾಲೀಕರಾದ ಗೌರವಾನ್ವಿತ ಕುಟುಂಬದ ಸದಸ್ಯರನ್ನು ಅನಾವಶ್ಯಕವಾಗಿ, ದುರುದ್ದೇಶ ಪ್ರೇರಿತರಾಗಿ ಅಶ್ಲೀಲ ಭಿತ್ತಿ ಪತ್ರವನ್ನು ಪ್ರದರ್ಶಿಸಿದ್ದಾರೆ ಎಂಬ ಕಾರಣದಿಂದ ಬಂಧಿಸಿದ್ದಾರೆ ಎಂಬ ವಿಚಾರವನ್ನು ನನಗೆ ತಿಳಿಸಿ, ಇದನ್ನು ನಾಳೆ ಪ್ರಸ್ತಾಪ ಮಾಡುತ್ತೇನೆ ಎಂದಿದ್ದರು. ನಾನು ಅಷ್ಟರೊಳಗೆ ಸಂಬಂಧಪಟ್ಟವರಿಂದ ವರದಿಯನ್ನು ತರಿಸಿಕೊಂಡಿರುತ್ತೇನೆ, ಈ ಬಗ್ಗೆ ತಮಗೆ ತಿಳಿಸುತ್ತೇನೆ ಎನ್ನುವಂತಹ ಮಾತನ್ನು ಅವರಿಗೆ ಹೇಳಿದ್ದೆ. ಈಗ ಅವರು ಆನುಷಂಗಿಕವಾಗಿ ಅದನ್ನು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ನನಗೆ ಈಗಾಗಲೇ ವರದಿ ಬಂದಿದೆ. ಅದರಲ್ಲಿ ಅವರು ಚಿತ್ರದಲ್ಲಿ ತೋರಿಸಿದ್ದಾರೆ ಎನ್ನುವುದಕ್ಕಿಂತ, " 'ಹೆಂಡತಿಯೊಬ್ಬಳು

ಮನೆಯೊಳಗಿದ್ದರೆ' ಎನ್ನುವಂತಹ ಸಿನಿಮಾದ ಭಿತ್ತಿಚಿತ್ರವನ್ನು ಹಚ್ಚುವಂತಹ ಸಂದರ್ಭದಲ್ಲಿ, ಅಲ್ಲಿ ದಿನಾಂಕ 14.03.2005ರಂದು ಸ್ತ್ರೀ ಶಕ್ತಿ ಸಂಘಟನೆಗಳ ಸದಸ್ಯರುಗಳಾದ ಶ್ರೀಮತಿ ಸೀತಾಲಕ್ಷ್ಮಿ, ಅಧ್ಯಕ್ಷರು, ಶ್ರೀಮತಿ ಶಾರದಮ್ಮ ಬಿಜೆಪಿ ನಗರಸಭಾ ಸದಸ್ಯರು, ಶ್ರೀಮತಿ ಸುವರ್ಣಾ ಶಂಕರ್ ಮುಂತಾದವರುಗಳ ನೇತೃತ್ವದಲ್ಲಿ ಶಿವಮೊಗ್ಗ ನಗರದಲ್ಲಿ ಮೆರವಣಿಗೆ ನಡೆಸಿ, ಅಶ್ಲೀಲ ಭಿತ್ತಿಪತ್ರದ ಬಗ್ಗೆ ಈಗಾಗಲೇ ನಾವುಗಳು ಚಳವಳಿ ನಡೆಸಿದ್ದೆವು, ಅದರಂತೆ CSI, ಕೋಟೆ ಠಾಣೆಯವರು ಕ್ರಮ ಕೈಗೊಂಡಿರುವುದು ಶ್ಲಾಘನೀಯ ಎಂದು ಜಿಲ್ಲಾಧಿಕಾರಿಗಳು ಕಛೇರಿ ಮತ್ತು ಈ ಕಛೇರಿಗೆ ಮನವಿ ಪತ್ರ ಸಲ್ಲಿಸಿರುತ್ತಾರೆ" ಎಂದು ಬರೆದಿದ್ದಾರೆ. ಆದರೆ ಈ ವಿಚಾರದಲ್ಲಿ ನಾನು ವೈಯಕ್ತಿಕವಾಗಿ ಅವರ ಜೊತೆಗೆ ಮಾತನಾಡಿದ ಮೇಲೆ, ಅದರಲ್ಲಿ ಸೇರಿಸಿದ್ದಾರೆ. "ದಿನಾಂಕ 15.03.2005ರಂದು ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷರಾದ ಶ್ರೀ ಎಸ್. ರುದ್ರೇಗೌಡರವರ ಮುಂದಾಳತ್ವದಲ್ಲಿ ನನ್ನ ಕಛೇರಿಗೆ ಬಂದು ಮನವಿ ಸಲ್ಲಿಸಿ, ಎಂ.ಜಿ.ವೀರಣ್ಣ, ವೀರಭದ್ರೇಶ್ವರ ಚಿತ್ರಮಂದಿರದ ಮಾಲೀಕರು ಇವರು ಗೌರವಾನ್ವಿತ ವ್ಯಕ್ತಿಯಾಗಿದ್ದು, ಅವರನ್ನು ಬಂಧಿಸಿದ ಕ್ರಮದ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿ, ಈ ಬಗ್ಗೆ ಗಮನ ಹರಿಸಬೇಕೆಂದು ಹಾಗೂ ಮುಂದೆ ಇಂತಹ ಘಟನೆಗಳಿಗೆ ಅವಕಾಶ ನೀಡದಂತೆ ಮನವಿ ಮಾಡಿರುತ್ತಾರೆ. ಈ ಬಗ್ಗೆ ಕೂಲಂಕಷವಾಗಿ ವಿಚಾರಣೆ ಮಾಡಿ, ಸಮಂಜಸವಾದ ಕ್ರಮ ಕೈಗೊಳ್ಳಲಾಗಿ, ಅವರುಗಳಿಗೆ ತೃಪ್ತಿಕರವಾದ ರೀತಿಯಲ್ಲಿ ಮನವರಿಕೆ ಮಾಡಿ ಕಳುಹಿಸಿಕೊಟ್ಟಿರುತ್ತೇನೆ, ಮುಂದಿನ ಕ್ರಮಗಳ ಬಗ್ಗೆ ನಿಗಾವಣೆಯನ್ನು ವಹಿಸಿ, ತಮಗೆ ವರದಿ ಮಾಡುತ್ತೇನೆ" ಎಂದು ಜಿಲ್ಲಾಧಿಕಾರಿಗಳಿಂದ ಬಂದಿದೆ. ಆ ಕಾರಣಕ್ಕೆ ನನಗೂ ಕೂಡ ವೈಯಕ್ತಿಕವಾಗಿ ಗೊತ್ತಿದ್ದಂತೆ ವೀರಭದ್ರೇಶ್ವರ ಸಿನಿಮಾ ಟಾಕೀಸಿನವರು ಬಹಳ ಗೌರವಾನ್ವಿತವಾದಂತಹ ವ್ಯಕ್ತಿಗಳು. ಅಲ್ಲಿ ಇವತ್ತಿನವರೆಗೂ ಕೂಡ ಯಾವುದೇ ಇಂತಹ ಅಶ್ಲೀಲವಾದವುಗಳನ್ನು ಪ್ರದರ್ಶನ ಮಾಡುವಂತದ್ದಾಗಲಿ, ಸೆನ್ಸಾರ್ ಅಗದೆ ಇರತಕ್ಕಂಥ ವಿಚಾರಗಳನ್ನು ಸಿನಿಮಾದಲ್ಲಿ ತೂರಿಸತಕ್ಕಂಥದ್ದು ಆಗಲಿ, ಯಾವ ಪ್ರಕರಣಗಳೂ ಕೂಡ ಇಲ್ಲ. ಸುಮಾರು 30 ವರ್ಷಕ್ಕಿಂತಲೂ ಹೆಚ್ಚು ಆ ಟಾಕೀಸ್ ಅಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಕೇವಲ ಅಲ್ಲಿ ಬಿತ್ತಿಪತ್ರ ಹಚ್ಚಿದ್ದಾರೆಂದು ಕ್ರಮ ಕೈಗೊಳ್ಳಲಾಗಿದೆ. ಈ ಬಿತ್ತಿಪತ್ರಕ್ಕೂ ಕೂಡ ಸೆನ್ಸಾರ್ ಮಂಡಳಿಯಿಂದ ಅನುಮತಿ ಪಡೆದಿರುತ್ತಾರೆ, ವಿತರಕರು ಅಥವಾ ಅದರ ಮಾಲೀಕರು ಆಗಿರತಕ್ಕಂಥವರು ಆ ಬಿತ್ತಿಪತ್ರಗಳನ್ನು ಕಳುಹಿಸಿಕೊಟ್ಟಿರುತ್ತಾರೆ ಅವರು ಅದನ್ನು ಅಂಟಿಸಿರುತ್ತಾರೆ. ಇವರು ಮೂರು ಜನ ಸದಸ್ಯರು ಏನು ದೂರು ಕೊಟ್ಟಿದ್ದಾರೆ ಎನ್ನುವುದು

ಈ ವಿಚಾರಕ್ಕೆ ದೂರು ಇಲ್ಲ. ಈ ಬಗ್ಗೆನೂ ಕೂಡ ನಾನು ಜಿಲ್ಲಾಧಿಕಾರಿಗಳ ಬಳಿ ಮಾತನಾಡಿದ್ದೇನೆ. ಮಾನ್ಯ ಈಶ್ವರಪ್ಪನವರು ಸಬ್ ಇನ್ಸ್‌ಪೆಕ್ಟರ್ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳಿದರು ನಾನು ಇದನ್ನು ತಿಳಿದುಕೊಂಡಿದ್ದೇನೆ, ನಾನು ಇದರ ಬಗ್ಗೆ ಎಸ್‌ಪಿ ಯವರ ಜೊತೆ ಮಾತನಾಡಿ ಪುನಃ ನಾನು ಅವರಿಗೆ ತಿಳಿಸುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಗೊತ್ತಿರುವ ಹಾಗೆ ಸೆನ್ಸಾರ್ ಮಂಡಳಿಯ ಅನುಮತಿ ಪಡೆದುಕೊಂಡು ಸಿನಿಮಾಗಳು ಹೊರ ಬರುತ್ತವೆ. ಈ ಸಿನಿಮಾಕ್ಕೆ ಸಂಬಂಧಪಟ್ಟ ಬಿತ್ತಿಪತ್ರವನ್ನು ಅಂಟಿಸುವುದು ಸರ್ವೇ ಸಾಮಾನ್ಯ. ಇತ್ತೀಚೆಗೆ ಹೆಣ್ಣು ಮಕ್ಕಳಲ್ಲಿ ಜಾಗೃತಿ ಉಂಟಾಗಿ ಅಶ್ಲೀಲವಾದ ಇಂಥ ಬಿತ್ತಿಪತ್ರಗಳನ್ನು ಅಂಟಿಸಬಾರದು ಎನ್ನುವ ಒಂದು ಕೂಗು ಎದ್ದಿದೆ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಆ ಜಿಲ್ಲೆಯ ಅಧಿಕಾರಿ, ಒಬ್ಬ ಎಸ್‌ಪಿ ಅಥವಾ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್, ಅಥವಾ ಸಬ್ ಇನ್ಸ್‌ಪೆಕ್ಟರ್, ರವರಿಗೆ ಕಾಮನ್‌ಸೆನ್ಸ್ ಬೇಡವೆ ? ಒಬ್ಬ ಸಿನಿಮಾ ಮಾಲೀಕ ಸಿನಿಮಾ ನಡೆಸುವವನು ತನಗೆ ಬಂದಿರುವ ಬಿತ್ತಿಪತ್ರಗಳನ್ನು ಅಂಟಿಸುತ್ತಾನೆ. ಅದಕ್ಕೆ ಅವನನ್ನು ಬಂಧನ ಮಾಡಿ ಜೈಲಿಗೆ ಹಾಕುವಂಥ ಮಟ್ಟಕ್ಕೆ ಆ ಸಬ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ ಉದ್ಧಟತನದಿಂದ ವರ್ತನೆ ಮಾಡುತ್ತಾರೆಂದರೆ ಏನರ್ಥ ? ಬೇಕಾದರೆ ವಾರ್ನ್ ಮಾಡಿ ಅಥವಾ ಆ ರೀತಿ ಬಿತ್ತಿಪತ್ರಗಳು ಬಂದಿದ್ದರೆ ಇನ್ನು ಮುಂದೆ ನಮ್ಮ ಅನುಮತಿ ತೆಗೆದುಕೊಂಡು ಅದನ್ನು ಅಂಟಿಸಬೇಕು ಅಥವಾ ಇನ್ನೇನು ಬೇಕಾದರೆ ಆ ಅಧಿಕಾರಿ ಹೇಳಬೇಕೇ ವಿನಾಃ ಯಾರೋ ಕೆಲವರು ಅದನ್ನು ಹೇಳಿದರು ಅಂದಾಕ್ಷಣಕ್ಕೆ ಅವರನ್ನು ಕರೆದುಕೊಂಡು ಹೋಗಿ ಜೈಲಿಗೆ ಹಾಕುತ್ತಾರೆಂದರೆ, ನಮ್ಮ ಪೊಲೀಸ್ ಅಧಿಕಾರಿಗಳಿಗೆ ಕಾಮನ್‌ಸೆನ್ಸ್ ಇದೆಯೇ ? ವ್ಯವಹಾರ ಜ್ಞಾನ ಇದೆಯೇ ? ಇದರಿಂದ ಸರ್ಕಾರಕ್ಕೆ ಏನಾದರೂ ಗೌರವ ತರುತ್ತಾ ? ಅವರನ್ನು ಸಸ್‌ಪೆಂಡ್ ಮಾಡುವುದು ಬೇರೆ, ಆದರೆ ಇಂಥ ನೂರಾರು ಘಟನೆಗಳು ನಡೆಯುತ್ತದೆ ಎಲ್ಲೋ ಒಂದು ಕಡೆ ಇಂಥ ಒಂದು ಘಟನೆ ಬೆಳಕಿಗೆ ಬಂದು ಈ ರೀತಿಯಾಗಿ ನಡೆದುಕೊಂಡು ಹೋದರೆ, ಯಾವುದಾದರೂ ನಾಗರಿಕ ಸಮಾಜ ಬದುಕುವುದಕ್ಕೆ ಆಗುತ್ತದೆಯೇ ? ಯಾರಾದರೂ ಇನ್ನು ಮುಂದೆ ಗೌರವದಿಂದ ತಲೆ ಎತ್ತುವುದಕ್ಕೆ ಆಗುತ್ತದೆಯೇ ? ಆದುದರಿಂದ, ಇದನ್ನು ಕೂಲಂಕುಷವಾಗಿ ಪರಿಶೀಲಿಸಿ ಆ ಛೇಂಬರ್ ಆಫ್ ಕಾಮರ್ಸ್‌ನ ಮಾನ್ಯ ರುದ್ರೇಗೌಡರವರು ಹೋಗಿ ಕೇಳಿಕೊಳ್ಳುವ ಮಟ್ಟಕ್ಕೆ ಹೋಯಿತು. ನಿಮಗೆ ಗೊತ್ತಿರುವ

ಹಾಗೆ ಅವನು ಗೌರವಾನ್ವಿತ ವ್ಯಕ್ತಿ, ಅದು ಬೇಡ ಯಾವನೇ ಬದ್ಮಾಶ್ ಆಗಿರಲಿ, ಮಾಲೀಕ ಎನ್ನುವ ಪ್ರಶ್ನೆಯಲ್ಲ. ಆ ಮಾಲೀಕನಿಗೂ ಇದಕ್ಕೆ ಏನು ಸಂಬಂಧ ? ಅವನೇನಾದರೂ ಬೇರೆ ಕ್ರಿಯೇಟ್ ಮಾಡಿಕೊಂಡು ಅಂಟಿಸಿದ್ದನೆ ? ಅವನೇನಾದರೂ ಅಂಥ ವ್ಯವಹಾರ ಮಾಡಲಿಕ್ಕೆ ಅಲ್ಲಿಗೆ ಹೋಗಿದ್ದನೆ ? ಸಾರ್ ಏನು ಸಾರ್ ಇದು ನಾನು ಇಂಥ ಘಟನೆಗಳನ್ನೇ ಕೇಳಿರಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ನಾನು ಇದನ್ನು ಸಮರ್ಥಿಸಲಿಕ್ಕೆ ಹೇಳುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಸಮರ್ಥನೆ ಮಾಡುತ್ತೀರಿ ಎಂದು ನಾನು ಹೇಳಲಿಲ್ಲ ನಿಮ್ಮ ಎಸ್‌ಪಿ ಆಗಲಿ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಆಗಲಿ ಅವರಿಗೇನೂ ಅನ್ನಿಸೇ ಇಲ್ಲವಲ್ಲ, ನಿಮ್ಮ ಹತ್ತಿರ ಅವರು ಉತ್ತರ ಕೊಡುವುದಕ್ಕೆ ಮುಂಚೆ ಅವರು ಕ್ಷಮಾಪಣೆ ಕೇಳಬೇಕಾಗಿತ್ತು. ಎಸ್‌ಪಿ ನನ್ನಿಂದ ತಪ್ಪಾಗಿದೆ ಇನ್ನು ಮುಂದೆ ಇಂಥದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಬೇಕಾಗಿತ್ತು. ಅವನಿಗೆ ಏನಾದರೂ ಜವಾಬ್ದಾರಿ ಇದ್ದರೆ ಈ ಮಾತು ಹೇಳಬೇಕಾಗಿತ್ತು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯ ಹೇಳಿದ್ದಾರೆ. ಆದರೆ, vicarious liability ಎಂದು ಇದ್ದೇ ಇರುತ್ತದೆ. ಏಕೆಂದರೆ, the act of the employee is also the act of the master. ಆದುದರಿಂದ ಆ ಕಾರಣಕ್ಕಾಗಿ vicarious responsibility ಕೆಳಗೆ ಬಿತ್ತಿಪತ್ರವನ್ನು ಯಾರೇ ಕಳುಹಿಸಿಕೊಟ್ಟಿದ್ದರೂ ಕೂಡ, ಅಲ್ಲಿ ಕೆಲವು ಪ್ರತಿಭಟನಾಕಾರರು ಇವರ ಗಮನಕ್ಕೆ ತಂದಿದ್ದರಿಂದ ಮಾಡಿದ್ದೇವೆಂದು ಅವರು ಹೇಳುತ್ತಾರೆ. ಆದರೆ ಇದನ್ನು ಮಾಡಿರತಕ್ಕಂಥ ಕ್ರಮ ಸರಿಯಲ್ಲ, ನಾಳೆ ಈ ವಿಚಾರ ಪ್ರಸ್ತಾಪ ಮಾಡುತ್ತೇವೆ ಅದನ್ನು ವರದಿ ತರಿಸಿಕೊಡಿ ಎಂದು ಮಾನ್ಯ ಈಶ್ವರಪ್ಪನವರು ಹೇಳಿದರು. ಈಗ ಅರ್ಧ ವರದಿ ಬಂದಿದೆ. ತಾವು ಈಗ ಪ್ರಶ್ನೆ ಮಾಡಿದ್ದರಿಂದ ನಾನು ಈ ಉತ್ತರ ಕೊಡಬೇಕಾಯಿತು.

ಶ್ರೀ ವಾಟಾಳ್ ನಾಗರಾಜ್ : ನಾಳೆ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಅಶ್ಲೀಲ ಚಿತ್ರಗಳು ಯಾವ್ಯಾವು ? ಇವುಗಳನ್ನು ಪ್ರದರ್ಶನ ಮಾಡಬಹುದೆ ? ಪ್ರದರ್ಶನ ಮಾಡಿದರೆ ಮಾಲೀಕನ ಬಂಧನ ಮಾಡಬಹುದೆ ? ಇವೆಲ್ಲದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಮಾನ್ಯ ಯಡಿಯೂರಪ್ಪನವರೇ, ಅಶ್ಲೀಲ ಚಿತ್ರಗಳು ಈ ಬಗ್ಗೆ ನಾನು

ತಮಗೆ ಏಕೆ ಹೇಳುತ್ತಿದ್ದೇನೆಂದರೆ, ಈ ಅಶ್ಲೀಲ ಚಿತ್ರಗಳನ್ನು ಪ್ರದರ್ಶನ ಮಾಡಿದ ತಕ್ಷಣ ಮಾಲೀಕನನ್ನು ಬಂಧನ ಮಾಡಬಹುದು, ಬಿಡಬಹುದು, ಅದು ಬೇರೆ ವಿಚಾರ ನಾನು ಅದಕ್ಕೆ ಹೋಗುವುದಿಲ್ಲ. ಆದರೆ ಅಶ್ಲೀಲ ಚಿತ್ರಗಳನ್ನು ಪ್ರದರ್ಶನ ಮಾಡಬಹುದೆ ? ಇದು ನನ್ನ ಪ್ರಶ್ನೆ. ಬೆಂಗಳೂರಿನಲ್ಲಿ ಏನಾಯಿತು, ನಾವು ಪತ್ರಿಕೆಗಳ ಮೂಲ ತಿಳಿದಿರುವಂತೆ, ಬೇಕಾದರೆ ನಾಳೆ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ, ಆದಕ್ಕೆ ಈಗ ನಾನು ಏನು ಹೇಳಲಿಲ್ಲ, ನಾಳೆ ನಾವು ಸಮಗ್ರವಾಗಿ ಮಾಹಿತಿ ತರಿಸುತ್ತಿದ್ದೇನೆ. ಈ ಹೆಂಡತಿಯೊಬ್ಬಳು ಮನೆಯೊಳಗೆ ಇದ್ದರೆ ಇದೊಂದೇ ಚಿತ್ರವಲ್ಲ ಅದರ ಬಗ್ಗೆ ಬಹಳ ಇತಿಹಾಸ ಇದೆ. ಈ 38ಬಿ ಸೆನ್ಸಾರ್ ಮಂಡಳಿಯವರು ಇದನ್ನು ಪ್ರದರ್ಶನ ಮಾಡಬಾರದೆಂದು ಹೇಳಿರುವಾಗ, ಸೆನ್ಸಾರ್ ಮಂಡಳಿಯವರು ಹೇಳಿರುವುದನ್ನು ಬದಿಗೊತ್ತಿ, ಪ್ರದರ್ಶನ ನಡೆದಿರತಕ್ಕಂಥ ಕತೆಗಳಿವೆ. ಆದುದರಿಂದ, ಈ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡೋಣ. ಮಾಲೀಕನ ಬಗ್ಗೆ ತಾವು ಏನು ಹೇಳಿದಿರಿ ಅದರ ಬಗ್ಗೆ ಗೌರವ ಇದೆ, ಈ ವಿಚಾರ ಬೇರೆ, ಆದರೆ ಅಶ್ಲೀಲ ಚಿತ್ರಗಳ ಬಗ್ಗೆ ಯಾರೋ ಹೇಳಿಬಿಟ್ಟರು ಎಂದರೆ, ಹೆಂಗಸರು ಅನ್ಯಾಯ ನಡೆದಿದೆ ಎಂದು ರಸ್ತೆಯಲ್ಲಿ ಮೆರವಣಿಗೆ ಮಾಡಿದರೆ ನಾನು ಒಪ್ಪುತ್ತೇನೆ, ರಸ್ತೆಯಲ್ಲಿ ಈ ರಾಜ್ಯದ ಮಹಿಳೆಯರೆಲ್ಲರೂ ಹೋಗಿ ಅನ್ಯಾಯ ನಡೆದಿದೆ ಎಂದು ಹೇಳಿದರೆ, ಅದನ್ನು ಸ್ವಾಗತಿಸಬೇಕು. ಹಾಗಾದರೆ ಅದು ಕರೆಕ್ಟ್, ಆದರೆ ಆ ಮಾಲೀಕನನ್ನು ಬಂಧಿಸಬಾರದು ಅಲ್ಲವೆ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಹೆಣ್ಣು ಮಕ್ಕಳಲ್ಲಿ ಜಾಗೃತಿ ಬಂದಿದೆ, ಅವರು ಮಾಡಿರುವುದು ಸರಿ ಎಂದು ನಾನು ಸ್ವಾಗತ ಮಾಡಿದ್ದೇನೆ, ಆದರೆ ಆ ಮಾಲೀಕನ ಬಂಧನಕ್ಕೆ ಇದಕ್ಕೆ ಏನು ಸಂಬಂಧ ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದು ಆ ರೀತಿ ಒಪ್ಪುವುದಕ್ಕೆ ಆಗುವುದಿಲ್ಲ, ಒಂದು ಸರ್ಕಾರದ ಸೆನ್ಸಾರ್ ಮಂಡಳಿ ಇದ್ದು, ಅವರು ಪ್ರದರ್ಶನಕ್ಕೆ ಯೋಗ್ಯ ಎಂದು ಸರ್ಟಿಫಿಕೇಟ್ ಕೊಟ್ಟಾದ ಮೇಲೆ, ಆ ಪೋಸ್ಟ್‌ರ್‌ಗಳನ್ನು ಇಲ್ಲಿಂದ ಕಳುಹಿಸುತ್ತಾರೆ. ಆ ಮಾಲೀಕರು ಪೋಸ್ಟ್‌ರ್ಸ್‌ನ್ನು ಪ್ರಿಂಟ್ ಮಾಡಿ ಅಂಟಿಸುವುದಿಲ್ಲ. ವಿತರಕರೇ ಆ ಸಿನಿಮಾದ ಜೊತೆಯಲ್ಲಿ ಪೋಸ್ಟ್‌ರ್ಸ್‌ನ್ನು ಸಪ್ಲೈ ಮಾಡುತ್ತಾರೆ. ಇಲ್ಲಿಗೆ ಬಂದು ಪೊಲೀಸ್‌ನವರು ಆ ಪೋಸ್ಟ್‌ರ್ ಕಳುಹಿಸಿದಂಥ ವಿತರಕರನ್ನು ಅರೆಸ್ಟ್ ಮಾಡಬೇಕಾಗಿತ್ತು. ಆ ಥಿಯೇಟರ್ ಮಾಲೀಕನನ್ನು ಅರೆಸ್ಟ್ ಮಾಡಿ, ಗೌರವಾನ್ವಿತ ವ್ಯಕ್ತಿಗಳನ್ನು ಬೀದಿಗೆ ತಂದು, ಕೋರ್ಟು 2–3 ದಿವಸ ರಜೆ ಇರುವ ದಿವಸ ಅವರು ಹೋಗಿ ಇವರನ್ನು

ಅರೆಸ್ಟ್ ಮಾಡಿ, ಸುಮ್ಮನೆ ಬೇಲ್ ಸಿಗದೇ ಇರುವ ರೀತಿ ಸ್ಥಿತಿ ನಿರ್ಮಾಣ ಮಾಡುವುದು ಎಷ್ಟರ ಮಟ್ಟಿಗೆ ಸರಿ ?

ಶ್ರೀ ವಾಟಾಳ್ ನಾಗರಾಜ್ : ನಾಳೆ ಈ ವಿಷಯವಾಗಿ ಸಮಗ್ರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವನೇನು ಅಫೀಮು ಕುಡಿದಿದ್ದನೆ ? ಏನು ತಿಂದಿದ್ದ. ಆ ಗೌರವಾನ್ವಿತ ವ್ಯಕ್ತಿಯನ್ನು ಜೈಲಿಗೆ ಹಾಕಿದನಲ್ಲ ಅವರ ಮಾರ್ಯದೆ ಏನಾಯಿತು ? ಅಶ್ಲೀಲ ಚಿತ್ರಗಳ ಸಮಸ್ಯೆಯ ಬಗ್ಗೆ ಸಮಗ್ರವಾಗಿ ಚರ್ಚೆ ನಂತರ ಮಾಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ನಿಮಿಷ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರೇ ಸಿಟ್ಟಾಗಬೇಡಿ, ತಾವು ಕೂಡ ಸಿಟ್ಟಾಗಬೇಡಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ದಯಮಾಡಿ ಇಲ್ಲಿ ಕೇಳಿ. ಇದು ಅಕಸ್ಮಾತ್ ಇದು ಒಂದು ಹೋರಾಟ ಆಗಿದ್ದು, ಪ್ರದರ್ಶನ ಆಗಿತ್ತು ಅಂದರೂ ಅರೆಸ್ಟ್ ಮಾಡಿ ಬೇಲ್ ಕೊಟ್ಟು ಬಿಡುಗಡೆ ಮಾಡುವಂಥ ಕಾಯಿದೆ ಅದು. ಲಾ ವನ್ನು ಕೂಡ ನೋಡಬೇಕು ಅಲ್ಲವೆ ? ಯೆಸ್ ನಾನು ತಪ್ಪು ಮಾಡಿದೆ ಎಂದರೆ, it is a bailable offence ಅವನನ್ನು ಅರೆಸ್ಟ್ ಮಾಡಿ ಬೇಲ್ ತೆಗೆದುಕೊಂಡು ಆಚೆಗೆ ಏಕೆ ಕಳುಹಿಸಲಿಲ್ಲ ಎನ್ನುವುದೇ ನಮ್ಮ ಪ್ರಶ್ನೆ. ಇದನ್ನು ಕೇಳುವುದಕ್ಕೆ ನಾವು ಇಲ್ಲಿ ನಿಂತಿರುವುದು. 292 ಕೆಳಗೆ, ನಾನು ಅದನ್ನು ಮಾತ್ರ ಕೇಳುವುದು, if it is a bailable offence ಆ ಪೊಲೀಸ್ ಆಫೀಸರ್ ಬೇಲ್ ಕೊಟ್ಟು ಅವರನ್ನು ಕಳುಹಿಸಬೇಕಾಗಿತ್ತು, ಅಂಥ ಒಂದು ಸ್ಥಿತಿ ಇದ್ದಾಗ, ಬೇಲ್‌ಬಲ್ ಅಫೆನ್ಸ್ ಕೆಳಗಡೆ ಒಬ್ಬ ಮನುಷ್ಯನನ್ನು ಅರೆಸ್ಟ್ ಮಾಡಿದರೆ, ಪ್ರಾಸಿಕ್ಯೂಟ್ ಮಾಡಿದರೆ, ಎರಡು ದಿವಸ ಗಟ್ಟಲೆ ಅವನು ಹೇಗೆ ಜೈಲಿಗೆ ಕಳುಹಿಸುತ್ತಾನೆ ? ಅವನೇನು ಓದಿಲ್ಲವೆ ? ಐಪಿಸಿ, ಸಿಆರ್‌ಪಿಸಿ, ಯ ಜ್ಞಾನ ಅವನಿಗೆ ಇಲ್ಲವೆ ? How can he send him to custody ? He should have given bail and sent that man to home. ಏಕೆ ಕಳುಹಿಸಲಿಲ್ಲ ಎನ್ನವು ಪ್ರಶ್ನೆಯನ್ನು ತಾವು ಸೀರಿಯೆಸ್ಸಾಗಿ ಕನ್ಸಿಡರ್ ಮಾಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಿ ಎರಡು ಬೇರೆ ಬೇರೆ ಇದೆ. ಏನು ಹೇಳುತ್ತಿರುವುದು ಎಂದರೆ, ಮಾನ್ಯ ವಾಟಾಳ್ ನಾಗರಾಜ್ ರವರು ಹೇಳುತ್ತಿರುವುದು ಸರಿ ಇದೆ. ಶಿವಮೊಗ್ಗ ನಗರದಲ್ಲಿ ಭಾರತೀಯ ಜನತಾ ಪಕ್ಷದ ಮಹಿಳಾ ಮೋರ್ಚಾದ ಕಾರ್ಯಕರ್ತೆಯರು ಅಶ್ಲೀಲ ಬಿತ್ತಿಪತ್ರಗಳನ್ನು ಅಂಟಿಸಬಾರದು ಎಂದು ಬಹಳವರ್ಷಗಳಿಂದ ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ. ಇದೇನು ಹೊಸದಲ್ಲ. ಈ ನೆಪ ತೆಗೆದುಕೊಂಡು ಸಂಜೆ 6 ಗಂಟೆಯ ಮೇಲೆ, ಚಿತ್ರ ಮಂದಿರದ ಮಾಲೀಕನನ್ನು ನೀವು ಬಂಧಿಸಿ, ಇದಕ್ಕೆ ಅದಕ್ಕೂ ಜೋಡಿಸುವುದು ಯಾವ ನ್ಯಾಯ ? ನಾನು ಹೇಳುವುದಕ್ಕೆ ಹೊರಟಿರುವುದು ಅದನ್ನೆ. ಅವನು ಜಿಲ್ಲಾಧಿಕಾರಿ ಇರಬಹುದು ರಕ್ಷಣಾಧಿಕಾರಿ ಇರಬಹುದು, ಇಡೀ ರಾಜ್ಯದಲ್ಲಿ ಮಹಿಳಾ ಜಾಗೃತಿಯಾಗುವ ಸಂದರ್ಭದಲ್ಲಿ ನಾವು ಅದನ್ನು ಸ್ವಾಗತ ಮಾಡೋಣ. ಅಶ್ಲೀಲವಾದ ಬಿತ್ತಿಪತ್ರ ಅಂಟಿಸಬಾರದು, ಅಂಥ ಚಿತ್ರಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದು ಇದು ಸರಿ. ಆದರೆ ಇಲ್ಲಿ ಏನು ಪ್ರಶ್ನೆ ಇದೆ ಎಂದರೆ, ಈ ಅಶ್ಲೀಲ ಎನ್ನುವುದರ ಬಗ್ಗೆ ಯಾರನ್ನು ಅರೆಸ್ಟ್ ಮಾಡಬೇಕಾಗಿತ್ತು ? ಹೀಗಾಗಿ ಬೆಂಗಳೂರಿನಲ್ಲಿ ಇದಕ್ಕೆ ಯಾರು ಸರ್ಟಿಫಿಕೇಟ್ ಕೊಟ್ಟರು ? ನೀವು ಆ ದಿಕ್ಕಿನಲ್ಲಿ ಪ್ರಯತ್ನಿಸಿ. ನಾನು ಅದಕ್ಕಾಗಿ ಏನು ಹೇಳುತ್ತಿದ್ದೇನೆಂದರೆ, ಯಾವ ಗೌರವಾನ್ವಿತ ನಾಗರಿಕರು, ಚಿತ್ರಮಂದಿರದ ಮಾಲೀಕರು, ಅವರಿಗೆ ಚಿತ್ರ ನಡೆಸುವುದು ಬಿಟ್ಟರೆ ಬೇರೆಯವರು ಗೊತ್ತಿಲ್ಲ. ಅಂಥವರನ್ನು ಸಂಜೆ ನೀವು ಅರೆಸ್ಟ್ ಮಾಡಿ ರಾತ್ರೋರಾತ್ರಿ ಮ್ಯಾಜಿಸ್ಟ್ರೇಟರ್ ಮುಂದೆ ಇಟ್ಟು ಅವರಿಗೆ ಬೇಲ್ ಸಿಗದ ರೀತಿಯಲ್ಲಿ ಮಾಡಿಕೊಂಡು, ಮೂರು ಮೂರು ದಿನ ಜೈಲಿನಲ್ಲಿ ಇಟ್ಟಂಥ ವ್ಯಕ್ತಿಗಳ ಬಗ್ಗೆ, ನಾನು ಏನು ಹೇಳಲಿಕ್ಕೆ ಇಚ್ಚಿಸುತ್ತೇನೆಂದರೆ, ಈ ಸರ್ಕಾರ, ಗೌರವಾನ್ವಿತ ವ್ಯಕ್ತಿಗಳಿಗೆ ನೀನು ತೊಂದರೆ ಕೊಟ್ಟಿದೆಯಾ ಅದಕೋಸ್ಕರ ನಿನ್ನ ಮೇಲೆ ಆ್ಯಕ್ಷನ್ ತೆಗೆದುಕೊಂಡಿದೆ ಎನ್ನುವ ಮಾತನ್ನು ತಾವು ತೋರಿಸಬೇಕಾಗುತ್ತದೆ, ಇದು ನಮ್ಮ ಮನವಿ. ಇದರಲ್ಲಿ ಬೇರೆ ಪ್ರಶ್ನೆಯಿಲ್ಲ. ಅಶ್ಲೀಲ ಚಿತ್ರಗಳು, ಅಶ್ಲೀಲ ಬಿತ್ತಿಪತ್ರಗಳು, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಅದು ಬೇರೆ ವಿಚಾರ, ಇದು ನಾಗರಿಕರಿಗೆ, ಒಂದು ಚಿತ್ರಮಂದಿರ ನಡೆಸುವ ಮಾಲೀಕರಿಗೆ ವಿತರಕರಿಂದ ಏನು ಪೋಸ್ಟರ್ ಬರುತ್ತದೆಯೋ ಅದನ್ನು ಅವರು ಅಂಟಿಸಿರುತ್ತಾರೆ. ಇದು ಸರಿಯೋ ತಪ್ಪೆ ? ಎನ್ನುವ ಯೋಚನೆ ಮಾಡಬೇಕು. ಅದಕೋಸ್ಕರ ನಾನು ಸರ್ಕಾರಕ್ಕೆ ಮನವಿ ಮಾಡುವುದು ಇಷ್ಟೆ. ಯಾವ ವ್ಯಕ್ತಿ ಈ ರೀತಿ ನಾಗರಿಕರಿಗೆ, ಗೌರವಾನ್ವಿತವಾಗಿ ವ್ಯಾಪಾರ ಮಾಡುವಂಥ ವ್ಯಕ್ತಿಗಳ ಬಗ್ಗೆ, ಈ ರೀತಿಯಾಗಿ ಏನು ಜೈಲಿಗೆ ಕಳುಹಿಸಿದ್ದಾರೆ, ಅಂಥ ಅವಮಾನವೀಯ ಪೊಲೀಸ್

ಅಧಿಕಾರಿ ಇಂಥ ದುಷ್ಕೃತ್ಯದಲ್ಲಿ ಭಾಗವಹಿಸಿದ್ದಾರೆ, ಅವರ ಬಗ್ಗೆ ಸರಿಯಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತಾ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಹೇಳಿದ ಹಾಗೆ, ಅವನನ್ನು ಸಸ್ಪೆಂಡ್‌ನಲ್ಲಿಟ್ಟು ಎನ್‌ಕ್ವಯರಿ ಮಾಡಬೇಕು. ಅವನನ್ನು ಸಸ್‌ಪೆಂಡ್ ಮಾಡಿ, ಎನ್‌ಕ್ವಯರಿ ಮಾಡಿ, ಇನ್ನು ಮುಂದೆ ಈ ರಾಜ್ಯದಲ್ಲಿ ಇಂಥದು ರಿಪೀಟ್ ಆಗಕೂಡದು. ಸಾರ್ ನಿಮ್ಮ ಅನುಭವದ ಮುಂದೆ ನಾವು ಯಾರು ಅಲ್ಲ. ತಾವು ಏನೋ ತತ್ಕಾಲಿಕವಾಗಿ ಅರ್ಧ ಉತ್ತರ ಓದಿ ನಾಳೆ ಹೇಳುತ್ತೀರಿ ಎಂದು ಹೇಳಿದಿರಿ ಅದು ಸರಿ ಇದೆ, ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ನಾಳೆ ನಿಮಗೆ ಕನ್‌ವಿನ್ಸ್ ಆದರೆ ದಯಮಾಡಿ ಅವನನ್ನು ಸಸ್‌ಪೆನ್ಸ್‌ನಲ್ಲಿ ಇಡಿ, ದಯಮಾಡಿ ಇನ್ನು ಮುಂದೆ ಈ ರಾಜ್ಯದಲ್ಲಿ ಇದು ರಿಪೀಟ್ ಆಗಬಾರದು, ಆ ಎಸ್‌ಪಿ ಆ ಮಾಲೀಕನ ಕ್ಷಮಾಪಣೆ ಕೇಳಬೇಕು. ಗೌರವಾನ್ವಿತ ನಾಗರಿಕರ ಮೇಲೆ ಈ ರೀತಿಯಾಗಿ ನಡೆದುಕೊಳ್ಳಲಿಕ್ಕೆ ಆಗುವುದಿಲ್ಲ. ಆ ಮಾಲೀಕ ಏನಾದರೂ ಬಹಳ ಸೂಕ್ಷ್ಮ ಇದ್ದರೆ, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಏನಾಗುತ್ತಿತ್ತು ? ಇವತ್ತು ಮಾರ್ಯಾದೆಗಿಂತ ದೊಡ್ಡದು ಯಾವುದು ಇದೆ ? ಸದನದಲ್ಲಿ ನಾವು ಇದನ್ನು ಹೇಗೆ ಸಾರ್ ಟಾಲ್‌ರೇಟ್ ಮಾಡಬೇಕು. ನೋ ಐ ಯಾಂ ಸಾರಿ.

ಶ್ರೀ ಎಂ.ಪಿ. ಪ್ರಕಾಶ್ : ನಾಳೆ ಈ ವಿಚಾರ ಪ್ರಸ್ತಾಪ ಮಾಡುತ್ತೇವೆಂದು ಅವರು ಹೇಳಿದ್ದರು. ನಾನೂ ಕೂಡ ಹಾಗೆ ಭಾವಿಸಿದ್ದೆ. ಈಗ ಈ ವಿಚಾರ ಪ್ರಸ್ತಾಪಿಸಿದೆ.

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರು ನನ್ನ ಛೇಂಬರ್‌ಗೆ ಬಂದು ಕೊಟ್ಟರು. ಈಗ ಎಲ್ಲರಿಗೂ ಅವಕಾಶ ಕೊಡುತ್ತಿದ್ದೆನ್ನೆಲ್ಲ ಅದಕ್ಕೆ ಅವರಿಗೂ ಈಗಲೇ ಅವಕಾಶ ಕೊಟ್ಟುಬಿಟ್ಟೆ. ಇಲ್ಲದಿದ್ದರೆ ನಾಳೇನೆ ಅವರಿಗೆ ಅವಕಾಶ ಕೊಡುತ್ತಿದ್ದೆ.

ಶ್ರೀ ಎಂ.ಪಿ. ಪ್ರಕಾಶ್ : ನಾಳೆ ಎಲ್ಲಾ ವಿವರಗಳನ್ನು ತರಿಸಿಕೊಂಡು ಉತ್ತರ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಗೊರಗುಂಟೆಪಾಳ್ಯದ ರಿಂಗ್ ರೋಡ್ ಜಂಕ್ಷನ್ ಹತ್ತಿರ ಇವತ್ತು ಬೆಳಿಗ್ಗೆ ನಡೆದ ಘಟನೆ